ಹೊತ್ತಿನಲ್ಲಿ ವಾಟ್ಸ್‌ಆ್ಯಪ್ ನೋಡುತ್ತಿರುವಾಗ ಅನಿತಾಳ ಮೆಸೇಜನ್ನು ನೋಡಿ ಯಾಕೆ ಸ್ವಲ್ಪ ದಿನಗಳ ಕಾಲ ಗೋವಾಗೆ ಹೋಗಬಾರದು ಎನಿಸಿತು. ಕೂಡಲೇ ಅನಿತಾಳಿಗೆ ಕೇಳಿದಾಗ, 'ಬಾ, ಈ ವಾರದಲ್ಲಿ ರೂಮೊಂದು ಖಾಲಿಯಾಗಲಿದೆ' ಎಂದಾಗ ಹಿಂದೆಮುಂದೆ ಯೋಚನೆ ಮಾಡದೆ ಫ್ಲೈಟ್ ಟಿಕೇಟ್ ಬುಕ್ ಮಾಡಿದ್ದಳು.

★★★

ಏರ್‌ಪೋರ್ಟಿಗೆ ಬಂದು ತಬ್ಬಿ ಸ್ವಾಗತಿಸಿದ್ದಳು ಅನಿತಾ. ಸಪ್ಪಗಿದ್ದ ಮುಖ ನೋಡಿ, 'ಕಮಾನ್ ಪಲ್ಲವಿ, ಈ ಒಂದಷ್ಟು ದಿನಗಳನ್ನು ಮನಸಾರೆ ಅನುಭವಿಸು. ಇಲ್ಲಿ ಹೆಚ್ಚಿನವರು ಬರೋದೆ ಅದಕ್ಕಾಗಿ, ಡೋಂಟ್ ವರಿ' ಎಂದು ರೂಮಿನ ತನಕ ಬಂದು ಬಿಟ್ಟು ಹೋಗಿದ್ದಳು. ಭರ್ತಿ ಎರಡು ದಿನ ಎಷ್ಟು ಸಾಧ್ಯವೋ ಅಷ್ಟು ಅತ್ತು ಹಗುರಾಗಲು ಪ್ರಯತ್ನಿಸಿದ್ದಳು. ಮೂರನೇ ದಿನ ಅನಿತಾಳ ಸಲಹೆಯಂತೆ ಬಾಡಿಗೆಗೆ ಟೂ ವೀಲರ್ ಒಂದನ್ನು ಪಡೆದು ಗೋವಾದ ಮಡಿಲಲ್ಲಿ ಸುತ್ತಲಾರಂಭಿಸಿದಳು. ಗಾಡಿ ಓಡಿಸುವಾಗ, ಸಮುದ್ರದ ಮಡಿಲಲ್ಲಿ ಕೂತಾಗ... ಪಲ್ಲವಿಯ ಮನಸ್ಸು ತಿಳಿಯಾಗುತ್ತಾ ಹೋಯಿತು. ಸಂಜೆ ಒಂದು ದಿನ ಅನಿತಾಳೊಂದಿಗೆ ಸಮುದ್ರದ ತೀರದಲ್ಲಿ ಕೂತು ಅದರ ಧೀಮಂತಿಕೆಗೆ ಬೆರಗಾಗುತ್ತಿದ್ದಳು. 'ಅರೇ, ನೋಡು! ಈ ಸಮುದ್ರದ ಬೆಳ್ನೊರೆಗಳು ಅದೆಷ್ಟು ಚೆಂದ. ಈ ಚೆಂದದ

